


# ಸೈಬರ್ ದಾಳಿ ರಕ್ಷಣೆಗೆ ಗೂಗಲ್ ಗುರಾಣಿ

ಸೈಬರ್ ವಂಚಕರಿಂದ ತನ್ನ ಬಳಕೆದಾರರನ್ನು ರಕ್ಷಿಸುವ ನಿಟ್ಟಿನಲ್ಲಿ ಟೊಂಕ ಕಟ್ಟಿರುವ ಗೂಗಲ್ ಈಚೆಗೆ ಹೊಸ ಅಸ್ತ್ರವನ್ನು ಪರಿಚಯಿಸಿದೆ.

■ **ಶಶಿಕುಮಾರ್ ಸಿ.**

ಸೈಬರ್ ವಂಚಕರಿಂದ ತನ್ನ ಕೋಟ್ಯಂತರ ಬಳಕೆದಾರರನ್ನು ರಕ್ಷಣೆ ಮಾಡುವ ಸಲುವಾಗಿ ಈ ಬಾರಿ ಗೂಗಲ್ ಬಲಿಷ್ಠ ಗುರಾಣಿಯೊಂದಿಗೆ ಮುನ್ನೆಲೆಗೆ ಬಂದಿದೆ. ಗುರಾಣಿಯಾಗಿ 'ಸೆಕ್ಯುರಿಟಿ ಚಾರ್ಟರ್' ಎಂಬ ಹೊಸ ಫೀಚರ್ ಹಿಡಿದಿರುವ ಗೂಗಲ್, ಸೈಬರ್ ಅಪರಾಧ ಕೃತ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿರಿಸಿದೆ.

ಸೈಬರ್ ಅಪರಾಧವು ಭಾರತಕ್ಕೆ ಬಹುದೊಡ್ಡ ಪಿಡುಗಾಗಿ ಪರಿಣಮಿಸಿದೆ. ಈ ಅಪರಾಧಗಳನ್ನು ತಡೆಗಟ್ಟಲು ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದ್ದರೂ ಕೃತ್ಯಗಳು ಎಗ್ಗಿಲ್ಲದೆ ನಡೆಯುತ್ತಿವೆ. ಹೀಗಾಗಿ, ತ್ವರಿತ ಸಮಯದಲ್ಲಿ ಹೆಚ್ಚು ಪರಿಣಾಮ ಬೀರಬಲ್ಲ ಸೆಕ್ಯುರಿಟಿ ಚಾರ್ಟರ್ ಫೀಚರ್ ಅನ್ನು ಟೆಕ್ ದೈತ್ಯ ಕಂಪನಿಯಾದ ಗೂಗಲ್ ಈಚೆಗೆ ಪರಿಚಯಿಸಿದೆ.

ಸೈಬರ್ ಬೆದರಿಕೆಗಳನ್ನು ಮೊದಲೇ ಪತ್ತೆ ಹಚ್ಚಲು ಮತ್ತು ಆ ಮಾಹಿತಿಯನ್ನು ಇತರ ಕಂಪನಿಗಳು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಲು ನೆರವಾಗುವುದು ಈ ಸೆಕ್ಯುರಿಟಿ ಚಾರ್ಟರ್‌ನ ಕಾರ್ಯ. ಇದು ಕೃತಕ ಬುದ್ಧಿಮತ್ತೆ ಆಧರಿತವಾಗಿ ಕಾರ್ಯನಿರ್ವಹಿಸಲಿದ್ದು, ಕಂಪನಿಗಳು ಹಾಗೂ ಸರ್ಕಾರಿ ಸಂಸ್ಥೆಗಳೊಂದಿಗೆ ಸಂವಹನ ನಡೆಸಲು ಸುಲಭ ವೇದಿಕೆಯನ್ನು ಕಲ್ಪಿಸುತ್ತದೆ.

'ಸೇಫರ್ ವಿತ್ ಗೂಗಲ್ ಇಂಡಿಯಾ ಶೃಂಗಸಭೆ'ಯ ಸಂದರ್ಭದಲ್ಲಿ ಗೂಗಲ್ ತನ್ನ ಹೊಸ 'ಸೆಕ್ಯುರಿಟಿ ಚಾರ್ಟರ್' ಅನ್ನು ಅನಾವರಣಗೊಳಿಸಿತು. ಡಿಜಿಟಲೀಕರಣದತ್ತ ಭಾರತ ದೃಢ ಹೆಜ್ಜೆಯನ್ನಿಟ್ಟಾಗಿದ್ದು, ದೇಶದ ಡಿಜಿಟಲ್ ಜಾಗವನ್ನು ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ಇದು ಕಾರ್ಯನಿರ್ವಹಿಸಲಿದೆ.

ಆನ್‌ಲೈನ್ ವಂಚನೆಯಿಂದ ಬಳಕೆದಾರರನ್ನು ರಕ್ಷಿಸುವುದು, ನಿರ್ಣಾಯಕ ಮೂಲಸೌಕರ್ಯಕ್ಕಾಗಿ ಸೈಬರ್ ಸುರಕ್ಷತೆಯನ್ನು ಉತ್ತೇಜಿಸುವುದು ಮತ್ತು ಕೃತಕ ಬುದ್ಧಿಮತ್ತೆಯನ್ನು ಜವಾಬ್ದಾರಿಯುತವಾಗಿ ಅಭಿವೃದ್ಧಿಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದರ ಮೇಲೆ ಸೆಕ್ಯುರಿಟಿ ಚಾರ್ಟರ್ ಗಮನಹರಿಸುತ್ತದೆ.

## ಪ್ರತಿಯೊಬ್ಬರಿಗೂ ಗೂಗಲ್ ಶ್ರೀರಕ್ಷೆ

ಆನ್‌ಲೈನ್ ಸ್ಕ್ಯಾಮ್‌ಗಳು ಭಾರತದಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿರುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಎಐ ಜನರೇಟೆಡ್ ಕಂಟೆಂಟ್, ಡೀಪ್ ಫೇಕ್ ವಿಡಿಯೊಗಳು ಹಾಗೂ ವಾಯ್ಸ್ ಕ್ಲೋನಿಂಗ್ (ಎಐ ಬಳಕೆ ಮಾಡಿ ಒಬ್ಬ ವ್ಯಕ್ತಿಯ ಧ್ವನಿಯನ್ನು ತಮಗೆ ಬೇಕಾದಂತೆ ಮರುಸೃಷ್ಟಿಸುವ ವಿಧಾನ) ವಿಧಾನದ ಮೂಲಕ ಸೈಬರ್ ಕೃತ್ಯಗಳನ್ನು ಎಸಗುತ್ತಿರುವ ಪ್ರಮಾಣ ಭಾರತದಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದೆ.

2024ರಲ್ಲಿ ಯುಪಿಐ ಸಂಬಂಧಿಸಿದಂತೆ 1087 ಕೋಟಿ ರೂಪಾಯಿಯಷ್ಟು ಹಣಕಾಸಿನ ವಂಚನೆಗಳು ಭಾರತದಲ್ಲಿ ನಡೆದಿವೆ. ಉದ್ಯಮ ಅಂದಾಜುಗಳು ಸೂಚಿಸುವ ಪ್ರಕಾರ, ನಿಯಂತ್ರಣ ಇಲ್ಲದಿದ್ದರೆ 2025ರಲ್ಲಿ ಭಾರತೀಯ ಸಂಸ್ಥೆಗಳು ಸೈಬರ್ ಅಪರಾಧದಿಂದ ₹20,000 ಕೋಟಿ ವರೆಗೆ ನಷ್ಟವನ್ನು ಅನುಭವಿಸಬಹುದು. ಇದೆಲ್ಲವನ್ನೂ ತಡೆಗಟ್ಟುವ ನಿಟ್ಟಿನಲ್ಲಿ ಸೆಕ್ಯುರಿಟಿ ಚಾರ್ಟರ್ ಕಾರ್ಯನಿರ್ವಹಿಸಲಿದೆ.

### ಸೆಕ್ಯುರಿಟಿ ಚಾರ್ಟರ್ ಕಾರ್ಯಮಿತಿ

'ಸೆಕ್ಯುರಿಟಿ ಚಾರ್ಟರ್' ಮುಖ್ಯವಾಗಿ ಮೂರು ವಿಷಯಗಳ ಮೇಲೆ ಕಾರ್ಯನಿರ್ವಹಿಸಲಿದೆ. ಒಂದು, ಇಂಟರ್‌ನೆಟ್ ಬಳಕೆದಾರರನ್ನು ಸೈಬರ್ ಅಪರಾಧಿಗಳ ವಂಚನೆಯಿಂದ ಸುರಕ್ಷಿತವಾಗಿರಿಸುವುದು ಮುಖ್ಯವಾದ ಕಾರ್ಯವಾಗಿದೆ. ಸರ್ಕಾರದ ಸಂಸ್ಥೆಗಳು ಹಾಗೂ ಮೂಲಸೌಕರ್ಯ ಉದ್ಯಮಗಳ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೈಬರ್ ಸುರಕ್ಷತೆಯನ್ನು ಇನ್ನಷ್ಟು ಬಲಪಡಿಸುವುದು ಸೆಕ್ಯುರಿಟಿ ಚಾರ್ಟರ್‌ನ ಎರಡನೆಯ ಕಾರ್ಯವಾದರೆ, ಜನರನ್ನು ರಕ್ಷಿಸುವ ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ ವ್ಯವಸ್ಥೆಗಳನ್ನು ನಿರ್ಮಿಸುವುದು ಮೂರನೆ ಕಾರ್ಯವಾಗಿದೆ.

ಸ್ಕ್ಯಾಮ್‌ಗಳ ವಿರುದ್ಧ ಸಹನಶೀಲತೆಯು ಉತ್ಪನ್ನದ ಮೇಲಿನ ರಕ್ಷಣೆ ಮತ್ತು ಬಳಕೆದಾರರ ಅರಿವು ಇವೆರಡರ ಸಂಯೋಜನೆಯಾಗಿದೆ. ಡಿಜಿಕವಚ್ ಕಾರ್ಯಕ್ರಮದಡಿಯಲ್ಲಿ ಸರ್ಕಾರದ ನೀತಿಗಳು ಮತ್ತು ಅಂತರ್ನಿರ್ಮಿತ ತಾಂತ್ರಿಕ ರಕ್ಷಣೆಗಳನ್ನು ಸಂಯೋಜಿಸಲಾಗಿದೆ. ಇದು ಹಾನಿಕಾರಕ ಮತ್ತು ಸೈಬರ್ ಅಪರಾಧಗಳನ್ನು ದೊಡ್ಡ ಪ್ರಮಾಣದಲ್ಲಿ ಮತ್ತು ಆಳವಾಗಿ ತಡೆಗಟ್ಟಲು, ಗುರುತಿಸಲು ಮತ್ತು ಅವುಗಳಿಗೆ ಸೂಕ್ತ ರೀತಿಯಲ್ಲಿ ಪ್ರತ್ಯುತ್ತರ ನೀಡಲು ನೆರವಾಗುತ್ತದೆ.

## ಡಿಜಿಕವಚ್ ಲಾಭವೇನು?

ಡಿಜಿಕವಚ್ ಮೂಲಕ ಸುಮಾರು 17.7 ಕೋಟಿಗೂ ಹೆಚ್ಚು ಭಾರತೀಯರಿಗೆ ಕೃತಕ ಬುದ್ಧಿಮತ್ತೆ ಒಳಗೊಂಡ ಉತ್ಪನ್ನಗಳು ಮತ್ತು ಆರ್ಥಿಕ ವಂಚನೆಗಳ ವಿರುದ್ಧ ಜಾಗೃತಿ ಮೂಡಿಸಲಾಗಿದೆ. ಗೂಗಲ್‌ನ ಸಿಸ್ಟಂಗಳು ಎಐಯೊಂದಿಗೆ ಹೆಚ್ಚು ಶಕ್ತಿಶಾಲಿಯಾಗಿದ್ದು, ಸ್ಕ್ಯಾಮ್ ಮಾಡುವ ವೆಬ್‌ಸೈಟ್‌ಗಳನ್ನು ಪತ್ತೆಹಚ್ಚಿ ಅವುಗಳ ಕಾರ್ಯಾಚರಣೆಗೆ ತಡೆಯೊಡ್ಡುತ್ತದೆ. ಇದರಿಂದಾಗಿ ಗ್ರಾಹಕ ಸೇವೆ ಮತ್ತು ಸರ್ಕಾರಿ ವೇದಿಕೆಗಳ ಮೇಲಿನ ಸ್ಕ್ಯಾಮ್ ದಾಳಿಗಳು ಕ್ರಮವಾಗಿ ಶೇ. 80 ಮತ್ತು ಶೇ. 70ರಷ್ಟು ಕಡಿಮೆಯಾಗಿದೆ. ■